ತೆಗೆದುಕೊಳ್ಳಬೇಕೆಂದು ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಾ ಇದೆ, ಅದಕ್ಕೆ ಹಣಕಾಸು ಒದಗಿಸುವ ಬಗ್ಗೆ ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ, ಇನ್‌ವೆಸ್ಟಿಗೇಷನ್‌ನ್ನು ಮೂರು ತಿಂಗಳಲ್ಲಿ ಪೂರ್ಣ ಮಾಡಿಸುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :— ನಮ್ಮ ಭಾಗ ಮಳೆಯ ಆಶ್ರಯದ ಭಾಗವಾಗಿರುವುದರಿಂದ, ಮಾನ್ಯ ಸಚಿವರೇನು ಸರ್ಕಾರದ ಮತಿಯಿಂದ ಉತ್ತರವನ್ನು ಕೊಟ್ಟಿದ್ದಾರೆ, ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆಂದು ಹೇಳಿದ್ದಾರೆ. ಅದು ಜರೂರಾಗಿ ಆಗಬೇಕು. ಏಕೆಂದರೆ, ಈ ಪ್ರಾಜೆಕ್ಟ್ ಪ್ರಾರಂಭವಾಗಿದ್ದು 1959ರಲ್ಲಿ, ಆದರೆ, ಇಲ್ಲಿಯವರೆಗೆ ಪೂರ್ಣಗೊಂಡಿಲ್ಲವೆಂಬ ಆತಂಕ ನಮ್ಮ ಜನರಲ್ಲಿದೆ. ಮಾನ್ಯ ಸಚಿವರು ಹೇಳಿದಹಾಗೆ, ಆದಷ್ಟು ಜರೂರಾಗಿ, ಒಂದು ಡಿವಿಜನ್ ಓಪನ್ ಮಾಡಿ, ಒಂದು ಕಾಂಪ್ರೆಹೆನ್ಸೀವ್ ಎಸ್ಟಿಮೇಟನ್ನು ಸರ್ಕಾರದ ಮುಂದೆ ಇಟ್ಟು, ಒಪ್ಪಿಗೆ ತೆಗೆದುಕೊಂಡು, ಆ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ :— ಇದರ ಬಗ್ಗೆ ಡೀಟೈಲ್ ಇನ್‌ವೆಸ್ಟಿಗೇಷನ್‌ಗೆ ಆರ್ಡರ್ ಮಾಡಿ ಮೂರು ತಿಂಗಳೊಳಗೆ ವರದಿಯನ್ನು ತರಿಸಿಕೊಳ್ಳುತ್ತೇವೆ.

ಧಾರವಾಡದಲ್ಲಿ ವಿದ್ಯುಚ್ಛಕ್ತಿ ಬಳಕೆ.

200(1381) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧಾರವಾಡ ಜಿಲ್ಲೆಯಲ್ಲಿ ಬಳಕೆಗಾಗಿ ಅವಶ್ಯಕತೆ ಇರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಆ) ಪ್ರಸ್ತುತ ಸರಬರಾಜು ಆಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣ ಎಷ್ಟು?

ಇ) ಈ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಧಾರವಾಡ ಜಿಲ್ಲೆಯಲ್ಲಿ ವಿದ್ಯುತ್‌ನ ಪ್ರಸ್ತುತ ಅನಿರ್ಬಂಧಿತ ಬೇಡಿಕೆ ಸರಾಸರಿ ದಿನವಹಿ ಸುಮಾರು 1.75 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಿದೆ.

ಆ) ಪ್ರಸ್ತುತ ಈ ಜಿಲ್ಲೆಗೆ ಸರಬರಾಜಾಗುತ್ತಿರುವ ವಿದ್ಯುತ್ ನ ಪ್ರಮಾಣ ಸರಾಸರಿ ದಿನವಹಿ ಸುಮಾರು 1.0 ದಶಲಕ್ಷ ಯೂನಿಟ್ಟುಗಳಷ್ಟಾಗಿರುತ್ತದೆ.

ಇ) ಸದ್ಯದ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ 8 ಗಂಟೆಗಳ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಅನಿವಾರ್ಯವಾಗಿದೆ. ಅಲ್ಲದೇ, ಸಂಜೆ 6 ರಿಂದ ರಾತ್ರಿ 10 ಗಂಟೆವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಮಾಡುವುದೂ ಸಹ ಅನಿವಾರ್ಯವಾಗಿದೆ. ಬೆಳಗಿನ ಮತ್ತು